ಅಲ್ಲ. ಪಿಸುಮಾತೂ ಅಲ್ಲ. ಮೆಲುಮಾತಿನ ಭಿನ್ನ ಲಯದಲ್ಲಿ ಜೀವ ಪಡೆಯುವ ದೃಢಮಾತು. ಹಾಗಂತ ಎಲ್ಲ ಕವಿತೆಗಳೂ ತಕ್ಷಣವೇ ಮಾತು ಆರಂಭಿಸುತ್ತದೆ ಎನ್ನಲಾಗದು. ಸ್ವಲ್ಪ ಕಾಯಬೇಕು. ಬಹುಶಃ ಅದಕ್ಕಾಗಿ ಮಮತಾ 'ಓದುವ' ಬಹುದಾರಿಯ ಅನ್ವೇಷಣೆಗೆ ತೊಡಗಿದರು. ಯಾಕೆಂದರೆ, ಅವರದು ಕಣ್ಣ ಕವಿತೆಗಳಲ್ಲ. ಕಿವಿಯ ಕವಿತೆಗಳು. ಕಿವಿಯೇ ಇಲ್ಲಿ ಕಣ್ಣಾಗಬೇಕು. ಮೇಲ್ನೋಟಕ್ಕೆ ಮಮತಾ ತನ್ನಂತರಂಗದ ಮಾತುಗಳನ್ನೇ ಕವಿತೆಯಾಗಿಸಿದ್ದಾರೆ ಅನ್ನಿಸಬಹುದು. ತನ್ನ ಅನುಭವಗಳನ್ನಷ್ಟೇ ಕವಿ ಕಥೆಯಾಗಿಸುತ್ತಾರೆ ಅನ್ನಿಸಬಹುದು. ಆದರದು ಅಷ್ಟೇ ಅಲ್ಲ. ಅದು ಪ್ರಕೃತಿ ಇರಲಿ, ಮತ್ತೊಂದಿರಲಿ, ಇನ್ನೊಂದಿರಲಿ, ಅದು ಪ್ರತ್ಯೇಕವಾಗಿರದೆ ಒಂದರೊಳಗೊಂದು ಮಿಳಿತವಾಗಿರುತ್ತದೆ.

ಹೆಣ್ಣಿನ ದೇಹದ ಮೇಲಿನ ಆಕ್ರಮಣ, ಹೆಣ್ಣನ್ನು ದೇಹಕ್ಕೆ ಸೀಮಿತಗೊಳಿಸಿ ನೋಡುವ ರಾಜಕಾರಣ, ಆ ದೇಹದೊಳಗೆ ಮತ್ತೆ ಕೆಲವು ಅಂಗವಾಗಿ ಮಾತ್ರ ಕಾಣುವ ಕುರುಡುತನ ಇದು ಕೇವಲ ಮಮತಾ ಅವರ ಅನುಭವವೇ? ಅಥವಾ ಹೊರಗಿನವರ ಅನುಭವ ಮಾತ್ರವೇ? ನಾನು ನೀನಾಗುವುದು, ನೀನೂ ಆಗುವುದು ಅವರ ನಡೆ. 'ನಾನು' ಎಂಬ ಕವಿತೆಯ 'ನಾನು'ವಿನಲ್ಲಿರುವ ಇನ್ವರ್ಟೆಡ್ ಕೊಮಾ ನೀನು, ಅವಳು, ಇವಳು, ಚಿಕ್ಕವಳು, ದೊಡ್ಡವಳು, ಹಸುಗೂಸು, ಮುದುಕಿ ಎಲ್ಲವೂ 'ನಾನು'.

**'ನಾನು'**
**ಅಂದರೆ;**
**ಒಂದು ಜೊತೆ**
**ಮೆತ್ತಗಿನ ಮೊಲೆ,**
**ತೊಡೆಸಂದಲ್ಲಿ ಅಡಗಿದ**
**ಕತ್ತಲಕೋಶ**

ಎಂಬ ಈ ಪುಟ್ಟ ಕವಿತೆಯನ್ನು ಹಲವು ರೀತಿಯಲ್ಲಿ ಓದಿಕೊಳ್ಳಬಹುದು. ನಾನು ಇದನ್ನು ಓದುವಾಗ ಮೆತ್ತಗಿನ ಮೊಲೆ? ತೊಡೆಸಂದಲ್ಲಿ ಅಡಗಿದ ಕತ್ತಲ ಕೋಶ? ಎಂದು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿಕೊಳ್ಳುತ್ತೇನೆ. ಈ ಕಾರಣದಿಂದ ಇದೊಂದು ಸಾಮಾಜಿಕ ಕವಿತೆ. ಆದ್ದರಿಂದಲೇ ಇದು ಹಲವರನ್ನು ಡಿಸ್ಟರ್ಬ್ ಮಾಡುತ್ತದೆ. ಇದೆಲ್ಲದರ ಜೊತೆಗೆ ಮಮತಾ ಅವರಿಗೆ ನವ್ಯದ ಅಭಿವ್ಯಕ್ತಿಯೆಡೆಗೆ ಗಾಢ ಸೆಳೆತವಂತೂ ಇದೆ. ಕಾವ್ಯ ಬಂಧ, ಭಾಷೆ, ಲಯ, ಪದಗಳ ಚಲಾವಣೆಯಲ್ಲಿ ಎಚ್ಚರ ಇವೆಲ್ಲವೂ ಅವರಿಗೆ ಮುಖ್ಯ. ಆದ್ದರಿಂದಲೇ ಮಮತಾ ಕನ್ನಡದ, ದೇಶ, ವಿದೇಶಗಳ ಕಾವ್ಯಪ್ರೇಮಿಗಳ ನಡುವಣ ಕವಿಯಾಗಿ ಉಳಿದರು. ಕಾವ್ಯಪ್ರೇಮದ ಸಿದ್ಧತೆ ಇಲ್ಲದವರಿಗೆ ತಕ್ಷಣವೇ ಅವರ ಕವಿತೆ ಅವರದೆನಿಸಿಕೊಳ್ಳುವುದಿಲ್ಲ. ಯಾಕೆಂದರೆ, ಅವರದು ಕೇವಲ ಓದು ಕವಿತೆಗಳಲ್ಲ ಎಂಬುದು ಒಂದಾದರೆ, ಅವರು ಜಗತ್ತಿನ ಎಂಥ ವಿಪ್ಲವದ ನಡುವೆಯೂ ತಕ್ಷಣದ ಪ್ರತಿಕ್ರಿಯೆಯನ್ನು ಕವಿತೆಯ ಮೂಲಕವೇ ಕೊಡಬೇಕು ಎಂಬ ಉಮೇದಿನವರಲ್ಲ. ಅದಕ್ಕವರು ಬೇರೆ ಅಭಿವ್ಯಕ್ತಿ ಕ್ರಮ ಬಳಸಿಕೊಂಡಾರು. ಇದು ಸರಿ ತಪ್ಪಿನ ಪ್ರಶ್ನೆಯಲ್ಲ. ಕವಿತೆಯನ್ನು ಅವರು ಭಾವಿಸಿಕೊಂಡ ರೀತಿ. ಹಾಗಂತ ಅವರು ಸಾಮಾಜಿಕ ದುರಂತಗಳ ಬಗೆಗೆ ಎಂದೂ ಕವಿತೆ ಬರೆಯದೆ ಸುಮ್ಮನಿರುತ್ತಾರೆ ಅಂತನೂ ಅಲ್ಲ. ಸಾಕ್ಷಿಯಾಗಿ, 'ಧರ್ಮಾಧರ್ಮದ ಮಾತು', 'ಗೌರಿ' ಮೊದಲಾದ ಕವಿತೆಗಳನ್ನು ಗಮನಿಸಬಹುದು.

ಅವರಲ್ಲಿ 'ನಾನು ನೀನಾಗುವುದು' ಒಂದು ರೀತಿಯಾದರೆ, 'ನೀನು ನಾನಾಗುವುದು' ಇನ್ನೊಂದು ರೀತಿ. ಈ ಇನ್ನೊಂದು ರೀತಿಯನ್ನು ಅವರು ಇನ್ನಷ್ಟು ಹೆಚ್ಚು ವಿಸ್ತರಿಸಬೇಕು. ಯಾಕೆಂದರೆ, ಇದು ಒಂದು ರೀತಿಯಲ್ಲಿ ಮಾಸ್- ಸಮೂಹವನ್ನು ಮುಟ್ಟಬಲ್ಲ ರೀತಿಯೂ ಹೌದು. "ನೀನು ಎನ್ನಂತೊಮ್ಮೆ ಒಡಲು ಗೊಂಡು ನೋಡಾ" ಅಂತ ಜೇಡರ ದಾಸಿಮಯ್ಯ ಶಿವನಿಗೆ ಸವಾಲು ಹಾಕುತ್ತಾನೆ. "ಒಮ್ಮೆ ಹೆಣ್ಣಾಗು ಪ್ರಭುವೇ" ಅಂತ ಬಾನು ಮುಷ್ತಾಕ್ ಕಥೆಯಲ್ಲಿ ಹೇಳ್ತಾರೆ. ಇವೆರಡೂ ವಾಚ್ಯವಾಗಿದ್ದರೂ ವೇದನೆಯ ಆತ್ಯಂತಿಕ ಅಭಿವ್ಯಕ್ತಿ. ಮತ್ತಿದು ನೀನು ನಾನಾಗ ಬೇಕೆಂಬ ಹಕ್ಕೊತ್ತಾಯ ಮತ್ತು ಇದು ಸಮೂಹವನ್ನು ಹೆಚ್ಚು ಕನೆಕ್ಟ್ ಆಗುತ್ತದೆ. ಮಮತಾ ಅವರಲ್ಲಿ ಮಾಸ್‌ಗೆ ಬೇಕಾದ, ತಟ್ಟುವ, ತಿಳಿಹೇಳುವ ಕವಿತೆಗಳು ಕಡಿಮೆ. ತಿಳಿಹೇಳುವುದರ ಬಗೆಗೆ ಅವರಿಗೆ ನಂಬಿಕೆಯೇ ಇಲ್ಲದಿರಬಹುದು. ಆದರೆ ಇವತ್ತು ಮಾಸ್‌ನೊಳಗಡೆ ಬಹುಸಂಖ್ಯೆಯ ಯುವಜನರು ಇದ್ದಾರೆ. ಬೃಹತ್ ಮಾಹಿತಿಯುಗದಲ್ಲಿ ಈ ಜೀವಗಳು ಪ್ರೀತಿಗಾಗಿ ಪತರುಗುಟ್ಟುತ್ತಿವೆ. ಮತ್ತೀಗ ನಾವು